**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಜಗದೇವ ಗುತ್ತೇದಾರ ಇವರ ಶೂನ್ಯವೇಳೆ ಪ್ರಸ್ತಾಪಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಉತ್ತರ.**

**ವಿಷಯ:**

ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಸ್ಥಾಪನೆಗೆ ಆಗ್ರಹ ಎನ್ನುವ ಶೀರ್ಷಿಕೆ ಅಡಿಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ ಸ್ಥಾಪನೆ ಮಾಡಬೇಕು ಎಂದು ಈಡಿಗ ಸಮಾಜದ ಮುಖಂಡರು ಅಗ್ರಹಿಸಿರುವ ವಿಷಯ ಪ್ರಕಟವಾಗಿದೆ.

ಶ್ರೀ ನಾರಾಯಣ ಗುರುಗಳ ತತ್ತ್ವ ಸಂದೇಶ ಮತ್ತು ಸಾಮಾಜಿಕ ಚಿಂತನೆಗಳ ಬಗ್ಗೆ, ಸಂಶೋಧನೆ, ಅಧ್ಯಯನ ಮತ್ತು ಪ್ರಚಾರಕ್ಕಾಗಿ ಸ್ಥಾಪಿಸಲಾಗುವ ಒಂದು ಸಂಸ್ಥೆ ಅಥವಾ ಕೇಂದ್ರ ಎಂದರೆ ಅದು ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠ, ಇದರ ಮುಖ್ಯ ಉದ್ದೇಶ ಜಾತಿರಹಿತ ಸಮಾಜ, ಏಕತೆ ಮತ್ತು ಮಾನವ ಧರ್ಮವನ್ನು ಪ್ರತಿಪಾದಿಸುವುದಾಗಿದೆ. ಇದನ್ನು ಕೇರಳ ಮತ್ತು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿವೆ. ಜಾತಿ, ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ವಿರೋಧಿಸಿ 'ಮನುಷ್ಯರೆಲ್ಲರೂ ಒಂದೇ ಎಂದು ಸಂದೇಶವನ್ನು ಪಸರಿಸಿ ಸಮಾಜ ಸುಧಾರಣೆ ಮಾಡುವುದು ಇದರ ಮುಖ್ಯ ಧ್ಯೆಯೋದ್ದೇಶವಾಗಿದೆ. ಗುರುಗಳ ಸಾಮಾಜಿಕ, ಧಾರ್ಮಿಕ ವಿಚಾರಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ, ಹೊಸ ಪೀಳಿಗೆಗೆ ತಲುಪಿಸಲು ಅಧ್ಯಯನ ಮತ್ತು ಸಂಶೋಧನೆಯ ಅಗತ್ಯತೆ ತುಂಬಾ ಇದೆ. ಆಡಂಬರವಿಲ್ಲದ ಸರಳ ವಿವಾಹಗಳನ್ನು ಪ್ರೋತ್ಸಾಹಿಸಿ ಸರಳ ವಿವಾಹಗಳನ್ನು ನೆರವೇರಿಸುವುದು ಅವರ ಧ್ಯೇಯೋದ್ದೇಶಗಳಲ್ಲಿ ಒಂದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಗುರುಗಳ ಆಶಯಗಳನ್ನು ಸಂವಿಧಾನದ ಮೌಲ್ಯಗಳೊಂದಿಗೆ ಬೆಸೆಯುವುದು ಕೂಡ ಇದರ ಮೂಲ ಉದ್ದೇಶವಾಗಬೇಕಾಗಿದೆ. ಗುರುಗಳ ತತ್ತ್ವಗಳ ಕುರಿತು ಸಂದೇಶ ಯಾತ್ರೆಗಳು, ಸಭೆಗಳು, ಮತ್ತು ಚರ್ಚಾ ಕಾರ್ಯಕ್ರಮಗಳು ಆಗಾಗ ನಡೆಯುತ್ತಲೇ ಇವೆ. ಸರಳವಾಗಿ ಹೇಳುವುದಾದರೆ, ನಾರಾಯಣ ಗುರುಗಳ ಆದರ್ಶಗಳನ್ನು ಪಸರಿಸಲು, ಅಧ್ಯಯನ ಮಾಡಲು ಮತ್ತು ಕಾರ್ಯಗತಗೊಳಿಸಲು ಇರುವ ವೇದಿಕೆಯನ್ನೇ ನಾರಾಯಣ ಗುರು ಅಧ್ಯಯನ ಪೀಠ' ಎನ್ನುವುದಾಗಿದೆ.

"ಕೇರಳವು ಸಾಕ್ಷರತೆಯಲ್ಲಿ ಪ್ರಗತಿ ಸಾಧಿಸಿದೆ ಎಂದರೆ ಅದಕ್ಕೆ ನಾರಾಯಣ ಗುರುಗಳ ಕೊಡುಗೆ ಕಾರಣ. ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಿದ್ದ ಅವರು ಸಾಮಾಜಿಕ ಕಳಕಳಿಯನ್ನು ಹೊಂದಿದ್ದರು. ದೇವಸ್ಥಾನಗಳನ್ನು ಹೆಚ್ಚು ಕಟ್ಟಬೇಡಿ, ಅದರ ಬದಲು ಶಾಲೆಗಳನ್ನು ಹೆಚ್ಚು ಕಟ್ಟಿ ಎನ್ನುವ ಸಂದೇಶವನ್ನು ಸಾರಿ ಸಾಕ್ಷರತೆಗೆ ಬಹಳ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದರು. ಅಂತಹ ಮಹಾನ ವ್ಯಕ್ತಿಯ ಬಗ್ಗೆ ಇಲ್ಲಿಯವರೆಗೆ ಅಧ್ಯಯನ ಪೀಠ ಸ್ಥಾಪಿಸದೆ ಸರ್ಕಾರ ನಿರ್ಲಕ್ಷ್ಯ ತೋರಿರುವುದು ಖೇದಕರ ಸಂಗತಿಯಾಗಿದೆ. ವಿಶ್ವವಿದ್ಯಾಲಯದಲ್ಲಿ ಶ್ರೀ ನಾರಾಯಣ ಗುರುಗಳ ಅಧ್ಯಯನ ಪೀಠ ಸ್ಥಾಪನೆ ಕುರಿತಂತೆ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಹಾಗೂ ಪ್ರಾಧ್ಯಾಪಕರಾದ ಡಾ.ಹೆಚ್.ಟಿ. ಪೋತೆಯವರು ಪ್ರಸ್ತಾವನೆಯ ಪರಿಶೀಲನಾ ವರದಿಯೊಂದನ್ನು ಸಿದ್ಧಪಡಿಸಿದ್ದು ಪೀಠ ಸ್ಥಾಪನೆಗೆ ಮಂಜೂರಾತಿ ಹಾಗೂ ಸರ್ಕಾರದ ಅಗತ್ಯ ಆರ್ಥಿಕ ನೆರವು ನೀಡುವಂತೆ ವಿಶ್ವವಿದ್ಯಾಲಯ ಕುಲಸಚಿವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಡಿಗ ಸಮಾಜ ದೊಡ್ಡ ಸಂಖ್ಯೆಯಲ್ಲಿದೆ ಕಲ್ಬುರ್ಗಿ ಜಿಲ್ಲೆ ಒಂದರಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ, ಸಮಾಜಕ್ಕೆ ದೇವರ ಸಮಾನರಾದ ನಾರಾಯಣ ಗುರುಗಳ ಬಗ್ಗೆ ಹೆಚ್ಚು ತಿಳಿಯುವ ಹಂಬಲ, ಅಧ್ಯಯನ ಮಾಡುವ ಆಸಕ್ತಿ ಬಹಳಷ್ಟು ಜನರಲ್ಲಿದೆ. ಆದರೆ ಅದಕ್ಕೆ ಒಂದು ವ್ಯವಸ್ಥೆ ಇಲ್ಲ. ಆದ್ದರಿಂದ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಅವರ ಅಧ್ಯಯನ ಪೀಠ ಸ್ಥಾಪಿಸಿ ಮಹಾತ್ಮರಿಗೆ ಗೌರವ ಕೊಡಬೇಕಿದೆ. ಸರ್ಕಾರ ಈಡಿಗ ಸಮಾಜದ ಭಾವನೆಗೆ ಸ್ಪಂದಿಸಬೇಕಿದೆ. ನಾರಾಯಣ ಗುರುಗಳ ತತ್ತ್ವ ಸಂದೇಶ ಮತ್ತು ಸಾಮಾಜಿಕ ಚಿಂತನೆಗಳ ಬಗ್ಗೆ ಸಂಶೋಧನೆಯಾಗಬೇಕಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಶ್ರೀ ಪ್ರಿಯಾಂಕ ಖರ್ಗೆ ಅವರು ಕೂಡ ಪತ್ರವನ್ನು ಬರೆದಿದ್ದಾರೆ. ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊಫೆಸರ್ ಎಚ್. ಟಿ. ಪೋತೆ ಅವರು ಪರಿಶೀಲಿಸಿ ಸಿದ್ಧಪಡಿಸಿದ ವರದಿಯನ್ನು ಸಲ್ಲಿಸಿದ್ದಾರೆ. ಅದನ್ನು ಸರ್ಕಾರ ಪರಿಗಣಿಸಬೇಕು ಎಂದು ಸಮಾಜದ ಮುಖಂಡರು ಆಗ್ರಹಿಸಿದ್ದಾರೆ.



Scanned with CamScanner

ಸದರಿ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ

**ಉತ್ತರ:-**

ಗುಲ್ಬರ್ಗಾ ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯದಲ್ಲಿ "ಶ್ರೀ ನಾರಾಯಣ ಗುರುಗಳ ಅಧ್ಯಯನ ಪೀಠ" ಸ್ಥಾಪಿಸಲು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಿ, ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಗಳನ್ನು ನಿರ್ಧರಿಸುವ ಬಗ್ಗೆ ಸರ್ಕಾರವು ಪ್ರೊ. ಓ. ಅನಂತರಾಮಯ್ಯ ವಿಶ್ರಾಂತ ಕುಲಪತಿಗಳು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಸರ್ಕಾರಕ್ಕೆ ನೀಡಿರುವ ವರದಿಯನುಸಾರ ಪರಿಶೀಲಿಸಿ ಅಗತ್ಯವಿದ್ದಲ್ಲಿ, "ಶ್ರೀ ನಾರಾಯಣ ಗುರುಗಳ ಅಧ್ಯಯನ ಪೀಠ" ಸ್ಥಾಪಿಸುವ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ವಿಶ್ವವಿದ್ಯಾಲಯಕ್ಕೆ ತಿಳಿಸಲಾಗಿರುತ್ತದೆ. ಅದರನ್ವಯ ವಿಶ್ವವಿದ್ಯಾಲಯದಿಂದ "ಶ್ರೀ ನಾರಾಯಣ ಗುರುಗಳ ಅಧ್ಯಯನ ಪೀಠ" ಸ್ಥಾಪನೆಗೆ ಸಂಬಂಧಿಸಿದಂತೆ ಯಾವುದೇ ವರದಿಯು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಪ್ರಾರಂಭಿಸಿರುವ ಹಾಗೂ ಪ್ರಾರಂಭಿಸಲು ಉದ್ದೇಶಿಸಿರುವ ಅಧ್ಯಯನ ಪೀಠಗಳ ಸ್ಥಿತಿ-ಗತಿಗಳ ಪರಿಶೀಲನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಈ ಹಿಂದೆ ರಚಿಸಲಾಗಿದ್ದ ಪ್ರೊ. ಅನಂತರಾಮಯ್ಯರವರ ವರದಿಯಲ್ಲಿನ ಅಂಶಗಳನ್ನು ಪರಾಮರ್ಶಿಸಲು ತ್ರಿಸದಸ್ಯ ಸಮಿತಿಯನ್ನು ರಚಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಗಿರುತ್ತದೆ.

ಅದರನ್ವಯ ಸರ್ಕಾರದ ಆದೇಶ ಸಂಖ್ಯೆ: ಇಡಿ 366 ಯುಆರ್‌ಸಿ 2025, ದಿನಾಂಕ: 25.11.2025ರಲ್ಲಿ ಪ್ರೊ. ಓ. ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ, ಇವರು ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಯನ ಪೀಠಗಳ ಸ್ಥಿತಿಗತಿಗಳ ಬಗ್ಗೆ ಸಲ್ಲಿಸಲಾದ ವರದಿಯನ್ನು ಹಾಗೂ ಎಲ್ಲಾ ಅಧ್ಯಯನ ಪೀಠಗಳಿಗೆ ಸಂಬಂಧಿಸಿದಂತೆ Model Statutes ಗಳನ್ನು ಪರಾಮರ್ಶಿ/ಪರಿಶೀಲಿಸಿ, ಸಮಗ್ರವಾದ ವರದಿಯನ್ನು ಸಲ್ಲಿಸುವಂತೆ ತಿಳಿಸಿ ತಜ್ಞರ ತ್ರಿಸದಸ್ಯ ಸಮಿತಿಯನ್ನು ರಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಸದರಿ ಸಮಿತಿಯು ಪ್ರಸ್ತಾಪಿತ ಕಾರ್ಯದಲ್ಲಿ ಕಾರ್ಯಪ್ರಗತಿಯಲ್ಲಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

*******

**ಸಂಖ್ಯೆ: ಇಡಿ 168 ಯುಜಿವಿ 2025**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ, ಸಚಿವರು

Scanned with CamScanner

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಪ್ರಾರಂಭಿಸಿರುವ / ಪ್ರಾರಂಭಿಸುವ ಅಧ್ಯಯನ ಪೀಠಗಳ ಸ್ಥಿತಿಗತಿಗಳ ಪರಿಶೀಲಿಸಲು ತ್ರಿಸದಸ್ಯ ಸಮಿತಿ ಕುರಿತು ಸಭೆ.

****

**ಪ್ರಸ್ತಾವನೆ:**

ಪ್ರೊ. ಓ ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ರವರು ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಯನ ಪೀಠಗಳ ಸ್ಥಿತಿಗತಿಗಳ ಬಗ್ಗೆ ಸಲ್ಲಿಸಲಾದ ವರದಿಯನ್ನು ಪರಾಮರ್ಶಿಸಿ/ ಪರಿಶೀಲಿಸಲು ಸರ್ಕಾರವು ತ್ರಿಸದಸ್ಯ ಸಮಿತಿಯನ್ನು ರಚಿಸಲು ತೀರ್ಮಾನಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 366 ಯುಆರ್‌ಸಿ 2025 ಬೆಂಗಳೂರು, ದಿನಾಂಕ:25 .11.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರೊ. ಓ ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ರವರು ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಯನ ಪೀಠಗಳ ಸ್ಥಿತಿಗತಿಗಳ ಬಗ್ಗೆ ಸಲ್ಲಿಸಲಾದ ವರದಿಯನ್ನು ಹಾಗೂ ಎಲ್ಲಾ ಅಧ್ಯಯನ ಪೀಠಗಳಿಗೆ ಸಂಬಂಧಿಸಿದಂತೆ Model Statutes ಗಳನ್ನು ಪರಾಮರ್ಶಿಸಲು ಈ ಕೆಳಕಂಡಂತೆ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಒಳಗೊಂಡ ತ್ರಿಸದಸ್ಯ ಸಮಿತಿಯನ್ನು ರಚಿಸಿ ಕೆಳಕಂಡ ಷರತ್ತಿಗೊಳಪಟ್ಟು ಆದೇಶಿಸಿದೆ.

| ತ್ರಿಸದಸ್ಯ ಸಮಿತಿ | | |
|---|---|---|
| ಕ್ರ.ಸಂ. | ಸದಸ್ಯರುಗಳ ಹೆಸರು & ವಿಳಾಸ<br>ಶ್ರೀ/ಶ್ರೀಮತಿ | |
| (1) | ಡಾ. ಬರಗೂರು ರಾಮಚಂದ್ರಪ್ಪ ನಂ.275 "ಸಂವೇದನ", 14ನೇ ಮುಖ್ಯ ರಸ್ತೆ, 11'ಬಿ' ಅಡ್ಡರಸ್ತೆ, ಜೆ.ಪಿ. ನಗರ 2ನೇ ಹಂತ,<br>ಬೆಂಗಳೂರು – 560078<br>ದೂರವಾಣಿ : 26592782<br>ಮೊಬೈಲ್ ಸಂಖ್ಯೆ: 7676662565 | ಅಧ್ಯಕ್ಷರು |
| (2) | ಡಾ. ವಸುಂಧರಾ ಭೂಪತಿ<br>ನಂ. 94/7, 9ನೇ 'ಎ' ಕ್ರಾಸ್, 3ನೇ ಮೈನ್, ಪ್ರಶಾಂತ ನಗರ, ಬೆಂಗಳೂರು – 560 079<br>ದೂರವಾಣಿ : 23238176<br>ಮೊಬೈಲ್ ಸಂಖ್ಯೆ: 9448852420<br>bhupathivasundhara@yahoo.co.in | ಸದಸ್ಯರು |
| (3) | ಡಾ. ನಟರಾಜ ಹುಳಿಯಾರ್<br>ನಂ. 64, 2ನೇ ಕ್ರಾಸ್,<br>ಬೆಮೆಲ್ ಲೇಔಟ್, 7ನೇ ಹಂತ,<br>ಕೃಷ್ಣಾ ಗಾರ್ಡನ್ ಮೇನ್,<br>ರೋಡ್, ಮೈಲಸಂದ್ರ, ಬೆಂಗಳೂರು – 560 059<br>ಮೊಬೈಲ್ ಸಂಖ್ಯೆ: 9449060393<br>natarajhuliyar@gmail.com | ಸದಸ್ಯರು |

-2

Scanned with CamScanner

| | | |
|---|---|---|
| 4) | ಡಾ: ಕೆ.ಜಿ. ಚಂದ್ರಶೇಖರ್<br>ಕಾರ್ಯನಿರ್ವಾಹಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು,<br>ಬೆಂಗಳೂರು. | ಸದಸ್ಯ<br>ಕಾರ್ಯದರ್ಶಿ/ಸಂಚಾಲಕರು |

**ಷರತ್ತು:-**

1. ಎಲ್ಲಾ ಅಧ್ಯಯನ ಪೀಠಗಳ ಸ್ಥಿತಿಗತಿಗಳು ಹಾಗೂ ಎಲ್ಲಾ ಅಧ್ಯಯನ ಪೀಠಗಳಿಗೆ ಸಂಬಂಧಿಸಿದಂತೆ Model Statutes ಗಳನ್ನು ಪರಾಮರ್ಶಿಸಿ/ಪರಿಶೀಲಿಸಿ ಸಮಗ್ರವಾದ ವರದಿಯನ್ನು 15 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಶಿಕಲಾ ಸಿ) 25/11/19
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ವಿಶ್ವವಿದ್ಯಾಲಯಗಳು - 2
ಉನ್ನತ ಶಿಕ್ಷಣ ಇಲಾಖೆ

**ಇವರಿಗೆ:**

1. ಡಾ. ಬರಗೂರು ರಾಮಚಂದ್ರಪ್ಪ ನಂ.275, "ಸಂವೇದನ", 14ನೇ ಮುಖ್ಯ ರಸ್ತೆ, 11'ಬಿ' ಅಡ್ಡರಸ್ತೆ, ಜೆ.ಪಿ. ನಗರ 2ನೇ ಹಂತ, ಬೆಂಗಳೂರು – 560078.
2. ಡಾ. ವಸುಂಧರಾ ಭೂಪತಿ, ನಂ. 94/7, 9ನೇ 'ಎ' ಕ್ರಾಸ್, 3ನೇ ಮೈನ್, ಪ್ರಶಾಂತ ನಗರ, ಬೆಂಗಳೂರು – 560 079, ದೂರವಾಣಿ : 23238176.
3. ಡಾ. ನಟರಾಜ ಹುಳಿಯಾರ್, ನಂ. 64, 2ನೇ ಕ್ರಾಸ್, ಬೆಮೆಲ್ ಲೇಔಟ್, 7ನೇ ಹಂತ, ಕೃಷ್ಣಾ ಗಾರ್ಡನ್ ಮೇನ್ ರೋಡ್, ಮೈಲಸಂದ್ರ, ಬೆಂಗಳೂರು – 560 059.
4. ಡಾ:ಕೆ.ಜಿ.ಚಂದ್ರಶೇಖರ್, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.

**ಪ್ರತಿ:**

1. ಮಾನ್ಯ ಗೌರವಾನ್ವಿತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with CamScanner